# ಅರಳುತ್ತಿದೆ ಆ್ಯನಿಮೇಷನ್ ಕ್ಷೇತ್ರ



ಬಿ.ಎಸ್.ಇಂದಿರಾ ಗುಪ್ತ
ಎಂ.ಇ., ಎಂಬಿಎ
ನಿರ್ದೇಶಕರು





ಆರ್ಥಿಕ ಹಿಂಜರಿತ ಎಲ್ಲರನ್ನೂ ಕಂಗೆಡಿಸಿದೆ. ಇನ್ನೂ ಎರಡು ವರ್ಷ ಸಕಲ ಕ್ಷೇತ್ರದ ಮೇಲೂ ಇದರ ಪ್ರಭಾವ ಉಳಿಯಲಿದೆ. ಅಭಿವೃದ್ಧಿ, ಉತ್ತೇಜನ ಹಾಗೂ ಸುಧಾರಣೆ ಮಾತು ಏನೇ ಇದ್ದರೂ ಅಷ್ಟರ ನಂತರವೇ ಎಂದು ಹೇಳಲಾಗುತ್ತಿದೆ. ಹೀಗಿರುವಾಗ ಪ್ರತಿಯೊಬ್ಬರ ಮನಸ್ಸಿನಲ್ಲೂ ಮೂಡಿರುವ ಒಂದೇ ಪ್ರಶ್ನೆ ಎಂದರೆ ಆರ್ಥಿಕ ಹಿಂಜರಿತದಿಂದ ಅತ್ಯಂತ ಬೇಗ ಸುಧಾರಿಸಿ ಮೊದಲಿನಂತೆ ಆಗುವ ಯಾವೊಂದು ಕ್ಷೇತ್ರವೂ ಇಲ್ಲವೇ?

ಹತ್ತು ಹಲವು ಕ್ಷೇತ್ರಗಳ ಒಳಗೆ ಇಣುಕಿ ನೋಡಿದಾಗ ಕಾಣುವುದು ಹಲವು ಕ್ಷೇತ್ರ. ಆದರೆ ಇದರಲ್ಲಿ ಸರ್ವ ರೀತಿಯಲ್ಲೂ ಜನರಿಗೆ ಅಪ್ಯಾಯಮಾನ ಎನಿಸಬಲ್ಲ ಕ್ಷೇತ್ರ ಆ್ಯನಿಮೇಶನ್ ಎಂಬ ಮಾತು ಕೇಳಿ ಬರುತ್ತಿದೆ.

ಹೌದು, ನ್ಯಾಸ್ಕಾಂ ಸಂಸ್ಥೆ ಬಿಡುಗಡೆ ಮಾಡಿರುವ ನಾನಾ ಕ್ಷೇತ್ರಗಳ ಆರ್ಥಿಕ ಸ್ಥಿತಿ ಕುರಿತ ಪಟ್ಟಿಯಲ್ಲಿ ಅತಿ ಶೀಘ್ರ ಸುಧಾರಿಸಬಲ್ಲ ಹಾಗೂ ಲಾಭದಾಯಕ ಉದ್ಯಮವಾಗಿ ಆ್ಯನಿಮೇಶನ್ ಕಂಡು ಬಂದಿದೆ. ತಹಾಗಂತ ಈ ಕ್ಷೇತ್ರಕ್ಕೆ ಆರ್ಥಿಕ ಹಿಂಜರಿತದ ಹೊಡೆತ ಬಿದ್ದಿಲ್ಲವೇ ಎಂದು ಪ್ರಶ್ನಿಸಬಹುದು. ಹೌದು, ಈ ಕ್ಷೇತ್ರವೂ ಆರ್ಥಿಕ ಹಿಂಜರಿತಕ್ಕೆ ಬಲಿಯಾದ ಪ್ರಮುಖ ಕ್ಷೇತ್ರಗಳಲ್ಲಿ ಒಂದು. ಆದರೆ ಅತಿ ವೇಗವಾಗಿ ಸುಧಾರಿಸಿಕೊಳ್ಳುತ್ತಿರುವ ಕ್ಷೇತ್ರವಾಗಿಯೂ ಬಿಂಬಿತವಾಗಿದೆ.

ನ್ಯಾಸ್ಕಾಂ ಪ್ರಕಾರ ಎಲ್ಲಾ ಸ್ಥಿತಿಯ ನಡುವೆಯೂ ಆ್ಯನಿಮೇಶನ್ ಕ್ಷೇತ್ರದ ಬೆಳವಣಿಗೆ ಶೇ.49ರಷ್ಟು ಇದೆ. 2010ರ ವೇಳೆಗೆ ಈ ಕ್ಷೇತ್ರದ ಬೆಳವಣಿಗೆ ಅತ್ಯಂತ ಉತ್ತುಂಗಕ್ಕೆ ಏರಲಿದ್ದು, ಸುಮಾರು 5 ಸಾವಿರ ಕೋಟಿ ರೂ. ವಾರ್ಷಿಕ ಆದಾಯ ಹೊಂದಲಿದೆ ಎಂದು ತಿಳಿಸಿದೆ.

## ಯಾರಿಗೆ ಬೇಡ ಮನರಂಜನೆ

ಇಂದು ಆ್ಯನಿಮೇಶನ್ ಕ್ಷೇತ್ರದ ಬಳಕೆ ಮನರಂಜನಾ ಕ್ಷೇತ್ರದಲ್ಲಿ ಆಗುತ್ತಿದೆ. ಧಾರಾವಾಹಿ, ಸಿನಿಮಾಗಳಲ್ಲಿ ಇವುಗಳ ಬಳಕೆ ಆಗುತ್ತಿದೆ. ಜಾಹೀರಾತುಗಳಂತೂ ಇದರ ಸಹಕಾರ ಇಲ್ಲದೇ ಪ್ರಸಾರವೇ ಆಗದು ಎನ್ನುವಂತಾಗಿದೆ. ಇಂದು ಆ್ಯನಿಮೇಶನ್ ಬಳಸಿದ ಸುಮಾರು 200 ಚಲನಚಿತ್ರಗಳು ಬಿಡುಗಡೆಗೆ ಸಿದ್ಧವಾಗಿ ನಿಂತಿವೆ. ಇದಲ್ಲದೇ ಸಾಕಷ್ಟು ಚಿತ್ರಗಳಲ್ಲಿ ನಾನಾ ವಿಧವಾದ ಆ್ಯನಿಮೇಶನ್ ಬಳಕೆ ಆಗುತ್ತಿರುವುದು ಎಲ್ಲರಿಗೂ ಗೊತ್ತು.

ಒಟ್ಟಾರೆ ಈ ಕ್ಷೇತ್ರ ಬಯಸುತ್ತಿರುವ ಮಾನವ ಸಂಪನ್ಮೂಲ ಅತ್ಯಲ್ಪ ಎನ್ನಲಾಗುತ್ತಿದೆ. ಇದರಿಂದ ಸಾಕಷ್ಟು ಮಂದಿ ಆ್ಯನಿಮೇಟರ್‌ಗಳ ಅಗತ್ಯ ಈ ಕ್ಷೇತ್ರಕ್ಕೆ ಇದೆ. ಭಾರೀ ಪ್ರಮಾಣದಲ್ಲಿ ಬೆಳೆಯುತ್ತಿರುವ ಈ ಕ್ಷೇತ್ರಕ್ಕೆ ವೇತನದ ವಿಷಯದಲ್ಲಿ ಈಗಲೂ ಯಾವುದೇ ವ್ಯತ್ಯಾಸ ಆಗಿಲ್ಲ. 16 ಸಾವಿರ ರೂ.ವರೆಗೂ ಆರಂಭಿಕ ವೇತನವಾಗಿ ಪಡೆಯುವ ಅವಕಾಶ ಇದೆ. ಪ್ರತಿಭೆ ಆಧರಿಸಿ ಈ ಮೊತ್ತದಲ್ಲಿ ಹೆಚ್ಚಳ ಆಗಲಿದೆ.

## ದೇಶಕ್ಕೆ ಉಜ್ವಲ ಭವಿಷ್ಯ

ಮುಂದಿನ ಕೆಲ ವರ್ಷದಲ್ಲಿ ದೇಶ ಆ್ಯನಿಮೇಶನ್ ಕ್ಷೇತ್ರದಲ್ಲಿ ಅಪಾರ ಯಶ ಗಳಿಸಲಿದೆ. ಕಾರಣ ಇದುವರೆಗೂ ಅಭಿವೃದ್ಧಿತ ರಾಷ್ಟ್ರಗಳು ಇಲ್ಲಿನ ಪ್ರತಿಭೆಗಳನ್ನು ಬಳಸಿಕೊಂಡು ತಮ್ಮ ದೇಶದಲ್ಲಿ ಆ್ಯನಿಮೇಶನ್ ಚಿತ್ರ, ಧಾರವಾಹಿ ನಿರ್ಮಿಸುತ್ತಿದ್ದವು. ಇದರಿಂದ ಹೆಚ್ಚಿನ ಆದಾಯ ಆ್ಯನಿಮೇಶನ್ ರಫ್ತಿನ ಮೂಲಕವೇ ಬರುತ್ತಿತ್ತು. ಎಷ್ಟೇ ಆದರೂ ಈ ಮೊತ್ತದಿಂದ ಅನುಕೂಲ ಆ್ಯನಿಮೇಶನ್ ಪಡೆದುಕೊಳ್ಳುವ ರಾಷ್ಟ್ರಕ್ಕೆ ಆಗುತ್ತಿತ್ತು ಎನ್ನುತ್ತಾರೆ **ಜಯನಗರ ನಾಲ್ಕನೇ ಬ್ಲಾಕ್‌ನಲ್ಲಿರುವ ಅರೇನಾ ಆ್ಯನಿಮೇಷನ್ ಅಕಾಡೆಮಿ ಮುಖ್ಯಸ್ಥೆ ಇಂದಿರಾ ಗುಪ್ತ** (9341228440).

ಇಂತ ಕಾರ್ಯಕ್ಕಾಗಿ ಅನೇಕ ವಿದೇಶಿ ಮೂಲಕ ಕಂಪನಿಗಳು ಭಾರತವನ್ನು ಹುಡುಕಿ ಬರುತ್ತಿವೆ. ಇಲ್ಲಿಯೂ ಸಹ ಅನೇಕ ಸಂಸ್ಥೆಗಳು ಪ್ರತಿಭೆಗಳಿಗೆ ತರಬೇತಿ ನೀಡುವ ಕಾರ್ಯ ಮಾಡುತ್ತಿವೆ. ಅವುಗಳಲ್ಲಿ ಒಂದು ಜಯನಗರದ ಅರೀನಾ ಆ್ಯನಿಮೇಷನ್. ಇಲ್ಲಿ ಆ್ಯನಿಮೇಷನ್ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಕಲಿಯುವ ಅವಕಾಶ ಕಲ್ಪಿಸಲಾಗಿದೆ. ಕಲಿಕೆಗೆ ಅರೆ ಕಾಲಿಕ ತರಬೇತಿಗಳು, ಡಿಪ್ಲೋಮಾ, ಎಂಜಿನಿಯರಿಂಗ್ ತರಬೇತಿ, ಹಾಗೂ ಅರೀನಾದ ವಿಶೇಷ ತರಬೇತಿಯಾದ "ಅರೀನಾ ಆ್ಯನಿಮೇಷನ್ ಅಕಾಡೆಮಿ ಸ್ಪೆಷಲಿಸ್ಟ್ ಪ್ರೋಗ್ರಾಂ (ಎಎಎಎಸ್‌ಪಿ) ಪ್ರಮುಖವಾದವು.

ಡಿಪ್ಲೋಮಾ ಇನ್ ಆ್ಯನಿಮೇಷನ್ ಎಂಜಿನಿಯರಿಂಗ್ (ಡಿಎಇ) ಎರಡೂವರೆ ವರ್ಷದ ತರಬೇತಿಯಾಗಿದೆ. ಇದು ಜಯನಗರದ ಅರೀನಾ ಆ್ಯನಿಮೇಷನ್ ಅಕಾಡೆಮಿಯಲ್ಲಿ ಲಭ್ಯ. ಇದು ಇಂದು ಅತ್ಯಂತ ಬೇಡಿಕೆಯಲ್ಲಿರುವ ತರಬೇತಿ ಆಗಿದ್ದು, ಇದರಲ್ಲಿ ಕಲಿಯುವವರ ಆಮೂಲಾಗ್ರ ಅಭಿವೃದ್ಧಿಗೆ ಯತ್ನಿಸಲಾಗುತ್ತದೆ. ಇದರಲ್ಲಿ 2ಡಿ ಹಾಗೂ 3ಡಿ ಆ್ಯನಿಮೇಷನ್ ಕುರಿತ ವಿಸ್ತ್ರತ ಅಧ್ಯಯನಕ್ಕೆ ಅವಕಾಶ ಮಾಡಿಕೊಡಲಾಗುವುದು.

## ಪದವಿ ದಾನ

ಆ್ಯನಿಮೇಷನ್ ಕ್ಷೇತ್ರ ಇದುವರೆಗೂ ಎದುರಿಸುತ್ತಿದ್ದ ಒಂದು ಮಹತ್ತರ ಹಿನ್ನಡೆಗೆ ಇದೀಗ ಪರಿಹಾರ ಲಭಿಸಿದೆ. ಹೌದು, ಇದುವರೆಗೂ ಒಂದು ಕಲಿಕೆಯಾಗಿ ಮಾತ್ರ ಪರಿಚಿತವಾಗಿದ್ದ ಆ್ಯನಿಮೇಷನ್‌ನಲ್ಲಿ ಪದವಿ ಮಾನ್ಯತೆ ಸಿಗುವುದಿಲ್ಲ ಎಂಬ ಕಾರಣಕ್ಕೆ ಅನೇಕ ಪಾಲಕರು ತಮ್ಮ ಮಕ್ಕಳನ್ನು ಇತ್ತ ಬರಲು ಬಿಡುತ್ತಿರಲಿಲ್ಲ. ಆಸಕ್ತ ಮಕ್ಕಳು ಒಂದೆಡೆ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಾ, ಆಸಕ್ತಿ ಪೂರೈಸಿಕೊಳ್ಳಲು ಆ್ಯನಿಮೇಷನ್ ಕೇಂದ್ರಗಳಿಗೆ ಬಂದು 3-4 ಗಂಟೆ ವ್ಯಾಸಂಗ ಮಾಡುತ್ತಿದ್ದರು. ಇವರ ಆಸಕ್ತಿ ಹಾಗೂ ಕಲಿಕೆಗೆ ಪದವಿ ಎರಡೂ ಈಗ ಆ್ಯನಿಮೇಷನ್ ಕ್ಷೇತ್ರದಲ್ಲಿ ಲಭ್ಯವಿದೆ.

ಸರಕಾರ ಹಾಗೂ ಯುಜಿಸಿ ಪ್ರಮಾಣಿತ ಎಂ.ಎಸ್. ವಿಶ್ವವಿದ್ಯಾಲಯದ "ಬಿಎಸ್ಸಿ ಆ್ಯನಿಮೇಷನ್ ಆಂಡ್ ಮಲ್ಟಿಮೀಡಿಯಾ" ಹೆಸರಿನಲ್ಲಿ ಪದವಿ ನೀಡುವ ಕಾರ್ಯ ಅರೀನಾ ಆ್ಯನಿಮೇಷನ್ ಅಕಾಡೆಮಿ ಮೂಲಕ ಇದೀಗ ಆಗುತ್ತಿದೆ. ಕಲೆ, ವಾಣಿಜ್ಯ ಅಥವಾ ವಿಜ್ಞಾನ ತರಗತಿಯಲ್ಲಿ ಪದವಿಪೂರ್ವ ತರಬೇತಿ ಪೂರೈಸಿದವರು ಈ ಪದವಿ ಕಲಿಕೆಗೆ ಅರ್ಹರು. 3ವರ್ಷದ ಈ ತರಬೇತಿಯು 6 ಸೆಮಿಸ್ಟರ್‌ಗಳನ್ನು ಒಳಗೊಂಡಿರಲಿದೆ. ಮಕ್ಕಳು ಪದವಿ ಪಡೆಯಲಿ ಎಂದು ಬಯಸುವ ಪಾಲಕರಿಗೆ ಹಾಗೂ ಒಂದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಆಶಿಸುವ ವಿದ್ಯರ್ಥಿಗಳಿಗೆ ಇದು ಸೂಕ್ತ ಆಯ್ಕೆ. ಎರಡು ಆಸೆಗೆ ಒಂದು ಕಲಿಕೆ ಎಂಬ ರೀತಿ ಇದು ಬಳಕೆ ಆಗುತ್ತಿದೆ.

ದಕ್ಷಿಣ ಭಾರತದ ಪ್ರಥಮ ಆ್ಯನಿಮೇಷನ್ ಅಕಾಡೆಮಿ ಎನಿಸಿಕೊಂಡಿರುವ ಅರೀನಾ ಆ್ಯನಿಮೇಷನ್ ಅಕಾಡೆಮಿಗೆ ಇದೀಗ 14ನೇ ವಾರ್ಷಿಕೋತ್ಸವದ ಸಂಭ್ರಮ. ಸಂಸ್ಥೆಯ ಈ ಸಂಭ್ರಮದ ನಡುವೆಯೇ ಇತ್ತೀಚೆಗೆ ನಡೆದ ಅರಿನಾ ಸ್ಟಾಟರ್ಜಿ ಮೀಟ್‌ನಲ್ಲಿ ಈ ಕೇಂದ್ರಕ್ಕೆ "ಬೆಸ್ಟ್ ಸೆಂಟರ್ ಆಫ್ ಕರ್ನಾಟಕ" ಪ್ರಶಸ್ತಿಯೂ ಬಂದಿರುವುದು ಹೆಮ್ಮೆಯ ಸಂಗತಿ.

ಹೆಚ್ಚಿನ ವಿವರಕ್ಕೆ ಅರೇನಾ ಆ್ಯನಿಮೇಷನ್ ಅಕಾಡೆಮಿ
ನಂ.11, 11ನೇ ಮುಖ್ಯರಸ್ತೆ, 4ನೇ ಬಡಾವಣೆ,
ಜಯನಗರ, ಬೆಂಗಳೂರು- 11.
ದೂರವಾಣಿ: 080-26653866, 41307228, 9341228440,
ವೆಬ್‌ಸೈಟ್: www.arenajayanagar.com

ಅರೀನಾ ಹಾಗೂ ಇಲ್ಲಿ ಸಿಗುವ ಶಿಕ್ಷಣದ ಕುರಿತು ವಿವರಕ್ಕೆ ಮೊಬೈಲ್ ಸಂಖ್ಯೆ: 9341228440 ಗೆ ನಿಮ್ಮ ವಿಳಾಸವನ್ನು ಎಸ್‌ಎಂಎಸ್(SMS) ಮಾಡಿ, ತರಬೇತಿ ಕುರಿತ ಉಚಿತ ಮಾಹಿತಿ ಪುಸ್ತಕ ಪಡೆಯಬಹುದಾಗಿದೆ.

### ಅರೀನಾ ಜಯನಗರ ಏಕೆ ?

- ಕಳೆದ 14 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ
- ಬೆಸ್ಟ್ ಸೆಂಟರ್ ಆಫ್ ಕರ್ನಾಟಕ ಪ್ರಶಸ್ತಿ ಪಡೆದಿದೆ
- 100% ಉದ್ಯೋಗ ಖಾತ್ರಿ
- ಎಸ್.ಎಸ್.ಎಲ್.ಸಿ / ಪಿಯುಸಿ / ಡಿಗ್ರಿ ವಿದ್ಯಾರ್ಥಿಗಳಿಗೆ ಅವಕಾಶ
- ನೂರಾರು ಕಂಪ್ಯೂಟರ್ ಹೊಂದಿರುವ ಹೆಗ್ಗಳಿಕೆ
- ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ
- ಅತ್ಯಂತ ಕುಶಲ ಮತ್ತು ನುರಿತ ಶಿಕ್ಷಕ ವೃಂದ